**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 313/2020**

| | | | |
|---|---|---|---|
| **ಹೆಸರು** | **:** | **ಶಿವರಾಜ** | **ದೋ.ಸಾ. 1** |
| **ತಂದೆಯ ಹೆಸರು** | **:** | **ಬಾಬುರಾವ** | **ಪ್ರಾ.ಸಾ. 4** |
| **ವಯಸ್ಸು** | **:** | **40 ವರ್ಷ** | **ದಿನಾಂಕಃ 18-01-2023** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ನರನಾಳ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನನಗೆ ಈ ಪ್ರಕರಣದ ಆರೋಪಿ ವಿಜಯಕುಮಾರ ಮತ್ತು ಸಾಕ್ಷಿದಾರರಾದ ಚಾಸಾ-4 ರಿಂದ 14 ರವರು ಗೊತ್ತು. ಸದರಿಯವರೆಲ್ಲರು ನಮ್ಮ ಊರಿನವರು. ಈ ಪ್ರಕರಣದಲ್ಲಿ ಮೃತನಾದ ಬಾಬುರಾವ ನನ್ನ ತಂದೆ.

ಈಗ್ಗೆ 3-4 ವರ್ಷದ ಹಿಂದೆ ಒಂದು ದಿನ ನಾನು ಚಿಮ್ಮನಚೋಡನಲ್ಲಿದ್ದಾಗ ಸಂಜೆ 04-30 ರಿಂದ 05-00 ಗಂಟೆ ಸಮಯದಲ್ಲಿ ನನ್ನ ಸ್ನೇಹಿತ ಶರಣು ಪಟ್ಟಳಿ ನನಗೆ ಕರೆ ಮಾಡಿ ನಾಗರಾಳ ಕ್ರಾಸ್ ಬಳಿ ರೇವಲಾ ತಾಂಡಾಕ್ಕೆ ಹೋಗುವ ರಸ್ತೆಯಲ್ಲಿ ಆಟೋವೊಂದು ಪಲ್ಟಿಯಾಗಿ ಸದರಿ ಆಟೋದಲ್ಲಿ ನಮ್ಮ ತಂದೆ ಮತ್ತು ಇತರರಿಗೆ ಗಾಯ ಆಗಿದ್ದು, ಅವರನ್ನು ಚಿಂಚೋಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ಹೇಳಿದ ಮೇರೆಗೆ ನಾನು ಮತ್ತು ನಮ್ಮ ಊರಿನ ಹಲವರು ತಕ್ಷಣ ಚಿಂಚೋಳಿ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಲಾಗಿ ನಮ್ಮ ತಂದೆಗೆ ಮೈಯೆಲ್ಲಾ ಗಂಭೀರ ಗಾಯಗಳಾಗಿತ್ತು ಮತ್ತು ಮೈ ಕೈ ಮೂಳೆ ಮುರಿದಿತ್ತು. ನಮ್ಮ ತಂದೆ ಮಾತಾನಾಡುವ ಸ್ಥಿತಿಯಲ್ಲಿರಲಿಲ್ಲ. ಅದೇ ರೀತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-9 ರಿಂದ 13 ರವರಿಗೂ ಮೈ ಕೈಗೆ ಗಾಯ ಆಗಿತ್ತು.

ನಮ್ಮ ತಂದೆಯನ್ನು ಹೆಚ್ಚಿನ ಚಿಕಿತ್ಸೆಗೆ ಗುಲ್ಬರ್ಗಾಕ್ಕೆ ಕರೆದುಕೊಂಡು ಹೋಗುವ ದಾರಿ ಮಧ್ಯೆ ಅವರು ತೀರಿಕೊಂಡಿರುತ್ತಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-9 ರಿಂದ 13 ರವರನ್ನು ನಾನು ಅಪಘಾತ ಹೇಗೆ

ಆಯಿತು ಎಂಬುದನ್ನು ವಿಚಾರಿಸಿದೆ. ಸದರಿಯವರು ಆಟೋವನ್ನು ಆರೋಪಿ ವಿಜಯಕುಮಾರ ವೇಗವಾಗಿ ಓಡಿಸುತ್ತಿದ್ದ ಮತ್ತು ರಸ್ತೆಯಲ್ಲಿ ಆಟೋ ಪಲ್ಟಿಯಾಯಿತು ಎಂದು ನನಗೆ ತಿಳಿಸಿರುತ್ತಾರೆ. ಅದರಂತೆ ನಾನು ಆರೋಪಿ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-2 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ನಂತರ ನಾನು ಪೊಲೀಸ್ ಠಾಣೆಗೆ ಮತ್ತೆ ಹೋಗಿಲ್ಲ ಮತ್ತು ಪೊಲೀಸರ ಮುಂದೆ ಯಾವುದೆ ಮರುಹೇಳಿಕೆ ಕೊಟ್ಟಿಲ್ಲ.

ಪೊಲೀಸರಿಗೆ ಘಟನಾ ಸ್ಥಳವನ್ನು ನಾನು ತೋರಿಸಿದ ಮೇರೆಗೆ ಸದರಿಯವರು ಪಂಚನಾಮೆ ಬರೆದಿರುತ್ತಾರೆ. ಸದರಿ ಸಂದರ್ಭದಲ್ಲಿ ಚಾಸಾ-4 ಮತ್ತು 5 ರವರು ಉಪಸ್ಥಿತರಿದ್ದರು.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ದೂರು ಮತ್ತು ಮರುಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 12-05-2019 ರಂದು ಸಂಜೆ 05-00 ಗಂಟೆಗೆ ನಮ್ಮ ತಂದೆ ಬಾಬುರಾವ ಕೆಲಸ ನಿಮಿತ್ಯ ಚಿಮ್ಮನಚೋಡಿಗೆ ಹೋಗಿದ್ದು ಅದೇ ದಿನ ಸಂಜೆ 05-45 ಗಂಟೆಗೆ ನಾನು ನಮ್ಮ ಊರಿನ ಬಸ್ ನಿಲ್ದಾಣದ ಹತ್ತಿರ ಕುಳಿತಿದ್ದಾಗ ಆರೋಪಿ ವಿಜಯಕುಮಾರ ಆತನಿಗೆ ಕೆಎ-32 ಸಿ-1127 ರ ಆಟೋವನ್ನು ವೇಗವಾಗಿ ನರನಾಳ ಕಡೆಯಿಂದ ಚಲಾಯಿಸಿಕೊಂಡು ಬಂದಿದ್ದರಿಂದ ರೇವಲಾ ತಾಂಡಾ ಕ್ರಾಸ್ ನಿಂದ ಸ್ವಲ್ಪ ದೂರದಲ್ಲಿ ಸದರಿ ಆಟೋ ಪಲ್ಟಿಯಾಯಿತು ಎಂದರೆ ಸರಿಯಲ್ಲ. ಆಟೋದಲ್ಲಿದ್ದ ಪ್ರಯಾಣಿಕರಿಗೆ ಗಾಯ ಆಯಿತು ಎಂದು ನನಗೆ ಗೊತ್ತಾಗಿದ್ದರಿಂದ ನಾನು ಮತ್ತು ನನ್ನ ಚಿಕ್ಕಪ್ಪನ ಮಗ ಗುರುಪಾಟೀಲ್ ಇಬ್ಬರು ಆಟೋ ಬಿದ್ದ ಸ್ಥಳಕ್ಕೆ ಹೊದೆವು ಎಂದರೆ ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಆಟೋ ಬಿದಿದ್ದನ್ನು ನಾನು ನೋಡಿಲ್ಲ ಆದರೆ ನನಗೆ ಫೋನ್ ಮೂಲಕ ಸದರಿ ವಿಚಾರ ಗೊತ್ತಾಗಿದ್ದರಿಂದ ಘಟನಾ ಸ್ಥಳಕ್ಕೆ ಹೋಗಿದ್ದೆ ಎನ್ನುತ್ತಾರೆ.

ಘಟನೆಯಲ್ಲಿ ಗಾಯಗೊಂಡಿದ್ದ ನನ್ನ ತಂದೆ ಮತ್ತು ಚಾಸಾ-9 ರಿಂದ 13 ರವರನ್ನು ಆ್ಯಂಬುಲೆನ್ಸ್ ನಲ್ಲಿ ನಾನು ಮತ್ತು ಇತರರು ಆಸ್ಪತ್ರೆಗೆ ಕಳುಹಿಸಿದೆವು ಎಂದರೆ ಸರಿಯಲ್ಲ. ಇತರೆ ಗಾಯಾಳುಗಳು ಬೇರೆ ಬೇರೆ ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿ.

ಅಪಘಾತ ಆದ ನಂತರ ಆರೋಪಿ ಘಟನಾ ಸ್ಥಳದಿಂದ ಓಡಿ ಹೋದ ಎಂದರೆ ಸರಿ.

ಅಪಘಾತ ನನ್ನ ಕಣ್ಣ ಮುಂದೆಯೇ ಆಗಿತ್ತು ಎಂದು ನಿಪಿ-2 ರ ದೂರಿನಲ್ಲಿ ಬರೆಸಿದ್ದೇನೆ ಎಂದರೆ ಸಾಕ್ಷಿ ಅಪಘಾತ ಆದ ವಿಚಾರ ನನಗೆ ಫೋನ್ ಮೂಲಕ ಗೊತ್ತಾಯಿತು ಎನ್ನುತ್ತಾರೆ.

ದಿನಾಂಕ 14-05-2019 ರಂದು ಪೊಲೀಸ್ ಠಾಣೆಗೆ ಹೋಗಿದ್ದ ನಾನು ಈ ಪ್ರಕರಣದ ಗಾಯಾಳು ಚಾಸಾ-11 ರವರನ್ನು ವಿಚಾರಿಸಿದಾಗ ಆರೋಪಿ ಆಟೋವನ್ನು ವೇಗವಾಗಿ ಚಲಾಯಿಸಿದ್ದರಿಂದ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದ ಮುಳ್ಳಿನ ಗಂಟಿ ಮೇಲೆ ಪಲ್ಟಿಯಾಗಿ ಬಿತ್ತು ಮತ್ತು ಆತನ ತಪ್ಪಿನಿಂದಲೆ ಅಪಘಾತವಾಯಿತು ಎಂದು ನನಗೆ ಗೊತ್ತಾಯಿತು ಎಂಬುದಾಗಿ ನನ್ನ ಮರುಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜೆ.ಹೆಚ್.ಜಿ. ವಕೀಲರ ಪರವಾಗಿ ಶ್ರೀ ಎಸ್.ಪಿ.ಆರ್. ವಕೀಲರಿಂದಃ</u>**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆರೋಪಿ ಉತ್ತಮ ಚಾಲಕ ಎಂದರೆ ಸರಿ. ಆರೋಪಿ ದಿನನಿತ್ಯ ನಮ್ಮ ಊರಿನಿಂದ ಬೇರೆ ಊರುಗಳಿಗೆ ತನ್ನ ಆಟೋದಲ್ಲಿ ಪ್ರಯಾಣಿಕರನ್ನು ಸಾಗಿಸುತ್ತಾನೆ ಎಂದರೆ ಸರಿ. ಆರೋಪಿ ಯಾವಾಗಲು ನಿಧಾನವಾಗಿ ಆಟೋ ಚಲಾಯಿಸುತ್ತಾನೆ ಎಂದರೆ ಸರಿ. ಅಪಘಾತ ನಡೆದ ಕಾಲಕ್ಕೆ ಆರೋಪಿ ಅಣ್ಣ, ಅತ್ತಿಗೆ, ಅಣ್ಣನ ಮಗ ಸಹ ಇದ್ದರು ಎಂದರೆ ಸರಿ. ಘಟನೆ ನಡೆಯಿತು ಎನ್ನಲಾದ ಕಾಲಕ್ಕೆ ಆರೋಪಿ ಆಟೋವನ್ನು ನಿಧಾನವಾಗಿ ಚಲಾಯಿಸುತ್ತಿದ್ದ ಎಂದರೆ ಸರಿ.

ಘಟನೆ ನಡೆಯಿತು ಎನ್ನಲಾದ ರಸ್ತೆಯಲ್ಲಿ ದೊಡ್ಡ ಗುಂಡಿ ಇದೆ ಎಂದರೆ ಸರಿ. ಘಟನೆ ನಡೆಯುವ ಕಾಲಕ್ಕೆ ಎದುರುನಿಂದ ಲಾರಿಯೊಂದು ಜೋರಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ಆರೋಪಿ ತನ್ನ ಆಟೋವನ್ನು ನಿಯಾಮಾನುಸಾರ ಎಡಕ್ಕೆ ಚಲಾಯಿಸುತ್ತಿದ್ದ ಎಂದರೆ ಸರಿ. ಲಾರಿ ಆಟೋಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಆರೋಪಿ ರಸ್ತೆಯ ಸಂಪೂರ್ಣ ಎಡಬದಿಗೆ ಬಂದಾಗ ಅಲ್ಲಿದ್ದ ಗುಂಡಿಯ ಮೇಲೆ ಆಟೋ ಚಲಿಸಿ ನಿಯಂತ್ರಣ ತಪ್ಪಿ ಪಲ್ಟಿಯಾಯಿತು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಆಗ ನಾನು ಅಲ್ಲಿ ಇರಲಿಲ್ಲ ಎನ್ನುತ್ತಾರೆ. ಅಪಘಾತದಲ್ಲಿ ಆರೋಪಿ ಯಾವುದೆ ತಪ್ಪು ಮಾಡಿಲ್ಲ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ ಎಂದರೆ ಸರಿ. ಅಪಘಾತವಾದ ನಂತರ ಆರೋಪಿಯೇ ನನ್ನ ತಂದೆ ಮತ್ತು ಇತರೆ ಗಾಯಾಳುಗಳನ್ನು ಆ್ಯಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸೇರಿಸಿದ್ದ ಎಂದರೆ ಸರಿ. ನನ್ನ ತಂದೆ ಮತ್ತು ಇತರರನ್ನು ಆಸ್ಪತ್ರೆಗೆ ಸೇರಿಸಿದ ನಂತರ ಆರೋಪಿ ಆತನ ಅಣ್ಣ, ಅತ್ತಿಗೆ ಮತ್ತು ಅವರ ಮಗುವನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋದ

ಎಂದರೆ ಸರಿ.

ನಾನು ಆರೋಪಿ ವಿರುದ್ಧ ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ದೂರನ್ನು ನಾನು ಪೊಲೀಸ್ ಠಾಣೆಯಲ್ಲಿ ಕೊಟ್ಟಿದ್ದೇನೆ. ಆಗ ಸಮಯ ಸಂಜೆ 05-00 ಗಂಟೆ ಆಗಿತ್ತು. ನಿಪಿ-2 ರ ದೂರನ್ನು ಪೊಲೀಸರು ನನಗೆ ಓದಿ ಹೇಳಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**